**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

ಸಿ.ಸಿ. ನಂಬರಃ 506/2016

ಸಿಡಬ್ಲೂಃ 3 ಪಿಡಬ್ಲೂಃ 1

ಸಾಕ್ಷಿದಾರರ ಹೆಸರು – ಭೀಮಪ್ಪಾ ರಾಮಪ್ಪಾ ಬಾಗಾಯಿ

ವಯಸ್ಸು – 65 ವರ್ಷ

ಉದ್ಯೋಗ – ಒಕ್ಕಲುತನ

ಸಾಕೀನ – ಲೋಳಸೂರ

**ದಿಃ17-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ ;**

ನನಗೆ ಚಾಸಾ-1 ರವರ ಪರಿಚಯವಿಲ್ಲ. 2 ನೇ ಆರೋಪಿಯ ಪರಿಚಯವಿಲ್ಲ. ಪೋಲಿಸರು ನನಗೆ ಹಾಗೂ ಚಾಸಾ 2 ರವರಿಗೆ ಯಾವುದೇ ಪಂಚನಾಮೆಗೆ ಕರೆಸಿಲ್ಲ, ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಗೆ ಅಪರಾಧ ಸ್ಥಳ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಪೋಲಿಸರು ನನ್ನಿಂದ ಪೋಲಿಸ ಠಾಣೆಯಲ್ಲಿ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದ ;**

ದಿನಾಂಕ 14-08-2015 ರಂದು ಗೋಕಾಕ ಶಹರದ ಪೋಲಿಸ ಠಾಣೆಯ ಪೋಲಿಸರು ಈ ಪ್ರಕರಣದಲ್ಲಿ ಪಂಚರಾಗಲು ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-2 ರವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ಪೋಲಿಸರು ನನ್ನನ್ನು ಹಾಗೂ ಚಾಸಾ-2 ರವರನ್ನು ಹಾಗೂ ತಮ್ಮ ಸಿಬ್ಬಂದಿಗಳನ್ನು ಕರೆದುಕೊಂಡು ನ್ಯಾಯಾಲಯದ ಆವರಣದಲ್ಲಿ ಕರೆಯಿಸಿ ಸಂಜೆ 04-00 ರಿಂದ 05-00 ಘಂಟೆಯವರೆಗೆ ಚಾಸಾ 1 ರವರು ತೋರಿಸಿದಂತೆ ಸ್ಥಳ ಪಂಚನಾಮೆಯನ್ನು ನಿಪಿ-1 ರಂತೆ ಮಾಡಿದ್ದರು ಎಂದರೆ ಸರಿಯಲ್ಲ. ಘಟನಾ ಸ್ಥಳವನ್ನು ಚಾಸಾ 1 ರವರು ನಮ್ಮ ಸಮಕ್ಷಮ ಪೋಲಿಸರಿಗೆ ತೋರಿಸಿದ ಮೇರೆಗೆ ಪೋಲಿಸರು ನಮ್ಮ ಸಮಕ್ಷಮ ನಿಪಿ-1 ರ ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಮಾಡಿದ್ದರು ಎಂದರೆ ಸರಿಯಲ್ಲ.

ನಾನು ನಿಪಿ-1 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ</u>

<u>ಮರುವಿಚಾರಣೆ ಇಲ್ಲಃ</u>

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೆ. ಕೇ. ಸರಿ ಇದೆ,

**ಪ್ರ.ದಿ.&ನ್ಯಾ .ದಂ., ಗೋಕಾಕ.**